# ಪುಟ್ಟಗೌರಿ ಅಜ್ಜಮ್ಮ ಈಗ ದಾಸನ ಅಜ್ಜಿ



**ಚಂದ್ರಕಲಾ ಮೋಹನ್**
**ಕಲರ್ಸ್ ಕನ್ನಡ 'ದಾಸ ಪುರಂದರ'ದ ಶಾಂತಮ್ಮ**

◆ **ಪುಟ್ಟಗೌರಿಯ ಅಜ್ಜಮ್ಮ, ಈಗ ದಾಸನಿಗೆ ಅಜ್ಜಿ ಆಗುತ್ತಿದ್ದೀರಿ.**

ಅಷ್ಟು ಮಾತ್ರ ಅಲ್ಲದೆ ಬೇರೆ ಕಾರಣಗಳಿಗೂ ಈ ಪಾತ್ರ ನನಗೆ ಅತ್ಯಂತ ವಿಶೇಷ ಅನಿಸುತ್ತಿದೆ. ಏಕೆಂದರೆ, ಟೀವಿಯಲ್ಲಿ ನನಗಿದು ಐವತ್ತನೇ ಧಾರಾವಾಹಿ. ವೃತ್ತಿ ಜೀವನದ ಮಹತ್ವದ ಮೈಲುಗಲ್ಲು ಕೂಡ ಹೌದು ಎಂದು ನಾನು ಭಾವಿಸಿದ್ದೇನೆ. ನನ್ನ ಮೊದಲ ಜನಪ್ರಿಯ ಧಾರಾವಾಹಿ 'ಮೂಡಲ ಮನೆ'ಯ ಪಾತ್ರದ ಹೆಸರು ಶಾಂತ. ಅದೇ 'ದಾಸ ಪುರಂದರ'ದಲ್ಲೂ ಸಿಕ್ಕಿದೆ. ಅದೂ ಅಂದಿನ 'ಈ ಟೀವಿ'ಯಲ್ಲಿ ಪ್ರಸಾರ ಆಗಿತ್ತು. ಅದೇ ಟೀವಿ ಇವತ್ತು ಕಲರ್ಸ್ ಕನ್ನಡ ಆಗಿದೆ. ಈ ಹಿಂದೆ ಇದರಲ್ಲೇ 'ಪುಟ್ಟಗೌರಿ'ಯಲ್ಲಿ ಅಜ್ಜಮ್ಮ ಆಗಿದ್ದೆ. ಇನ್ನೂ ದಾಸನ ಜನನ ಆಗಿಲ್ಲ. ಶೀಘ್ರದಲ್ಲಿ ನಿರೀಕ್ಷಿತ ಕಂದನಿಗೆ ಅಜ್ಜಿ ಆಗುತ್ತೇನೆ.

◆ **ನಿಮ್ಮ ವೃತ್ತಿ ಜೀವನದ ಆರಂಭದಲ್ಲಿ ಟೀವಿ ಹೇಗಿತ್ತು?**

1998ರಿಂದ ಟೀವಿ ಮಾಧ್ಯಮದಲ್ಲಿ ಅಭಿನಯವನ್ನು ಆರಂಭಿಸಿದೆ. ಅದಕ್ಕಿಂತ ಮುಂಚೆ ನಾನು ರಂಗಭೂಮಿ ಕಲಾವಿದೆಯಾಗಿ ಪರಿಚಿತಳಾಗಿದ್ದೆ. ನನ್ನ ಹತ್ತನೇ ವಯಸ್ಸಿನಿಂದ ಬಣ್ಣವನ್ನು ಹಚ್ಚುತ್ತಿದ್ದೇನೆ. ಟೀವಿ ಜಗತ್ತು ಈಗಿನಷ್ಟು ತಾಂತ್ರಿಕವಾಗಿ ಬೆಳೆದಿರಲಿಲ್ಲ. ದೂರದರ್ಶನದ 'ಮರೀಚಿಕೆ'ಯಲ್ಲಿ ಒಂದು ಪುಟ್ಟ ಪಾತ್ರದ ಮೂಲಕ ನಾನು ಪರಿಚಯ ಆದೆ. ಅದು ಒಂದೇ ದಿನ ಪ್ರಸಾರವಾಗಿತ್ತು. ನನ್ನ ತವರು ಮಂಡ್ಯ. ನನ್ನ ಪತಿ ಬೆಂಗಳೂರಿನವರು. ನನ್ನ ತಾಯಿ–ತಂದೆ, ತಾತ ಎಲ್ಲರೂ ರಂಗಭೂಮಿಯ ಕಲಾವಿದರು. ನಮ್ಮದೇ ಒಂದು ಕಂಪನಿ ಇತ್ತು. ಸ್ವಲ್ಪ ದಿನ ನಾನು ಗ್ರಾಮೀಣ ರಂಗಭೂಮಿಯಲ್ಲಿಯೂ ನಟಿಯಾಗಿ ಕೆಲಸ ಮಾಡಿದ್ದೇನೆ. 'ಋಣಾನುಬಂಧ', ತುಳುವಿನ 'ಪಿಲ್ಬೈಲ್ ಯಮುನಕ್ಕ' ಸೇರಿ 30ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದೇನೆ.

◆ **ದೀರ್ಘ ಪಯಣ ಹೇಗೆ ಉಳಿಸಿಕೊಂಡಿದ್ದೀರಿ?**

ನಟನೆಯನ್ನು ನಿರಂತರವಾಗಿ ಕಾಪಾಡಿಕೊಳ್ಳಲು ನಮ್ಮ ಕುಟುಂಬ ತುಂಬ ಪ್ರೋತ್ಸಾಹ ಮಾಡಿದೆ. ಅದಕ್ಕೆ ಸರಿಸಮ ಎನ್ನುವಂತೆ ಸಹಕಲಾವಿದರು ಕೈಜೋಡಿಸಿದ್ದಾರೆ. ಒಬ್ಬ ಕಲಾವಿದೆಯಾಗಿ ದೀರ್ಘಕಾಲ ಉಳಿದಿದ್ದೇನೆ, ಬೆಳೆದಿದ್ದೇನೆ ಅಂದರೆ ಅದಕ್ಕೆ ಅಭಿಮಾನಿಗಳೂ ಕಾರಣ. ಯಾವುದೇ ಕಲಾವಿದರ ಯಶಸ್ಸಿಗೆ, ಕಲೆಯ ಅಭಿಮಾನಿಗಳ ಆಶೀರ್ವಾದವೇ ಮೂಲ ಎನ್ನುವುದನ್ನು ನಾನು ನಂಬುತ್ತೇನೆ.

◆ **ಐವತ್ತು ಪಾತ್ರಗಳಲ್ಲಿ ನಿಮ್ಮ ಆಯ್ಕೆಯ ನಾಲ್ಕು ಪಾತ್ರಗಳು ಅಂದರೆ.**

ಹಾಗೆ ಒಂದು ಎರಡು ಎಂದು ಆಯ್ಕೆ ಮಾಡಲು ಆಗುವುದಿಲ್ಲ. ಅನೇಕ ಧಾರಾವಾಹಿಗಳು ಯಶಸ್ವಿಯಾಗಿವೆ. ಕೆಲವು ಅತ್ಯಂತ ಜನಪ್ರಿಯತೆ ತಂದುಕೊಟ್ಟಿವೆ. 'ಮೂಡಲ ಮನೆ', 'ಗೋದೂಳಿ', 'ಕುಸುಮಾಂಜಲಿ', 'ಕಾದಂಬರಿ', 'ಕಾವ್ಯಾಂಜಲಿ', 'ಬೆಂಕಿಯಲ್ಲಿ ಅರಳಿದ ಹೂವು' ಹೀಗೆ ಅನೇಕ ಪಾತ್ರಗಳಿವೆ. ಅದರಲ್ಲೂ 'ಮೂಡಲ ಮನೆ'ಯ ಶಾಂತ ನಿರ್ವಹಿಸಿ 20 ವರ್ಷ ಕಳೆದರೂ ಇನ್ನೂ ಉತ್ತರ ಕರ್ನಾಟಕದ ಕೆಲವರು ಶಾಂತ ಎಂದೇ ಕರೆಯುತ್ತಾರೆ. 'ಗೋದೂಳಿ' ಮಾಡಿ 22 ವರ್ಷ ಆಗಿರಬಹುದು. ಈಗಲೂ ನಮ್ಮ ಸಹಕಲಾವಿದರು ಚಾಂದಿನಿ ಎಂದು ಕರೆಯುತ್ತಾರೆ. ಇಂತಹ ಅನೇಕ ಧಾರಾವಾಹಿಗಳು ಇವೆ. ಇತ್ತೀಚಿನ ದಿನಗಳಲ್ಲಿ 'ಪುಟ್ಟಗೌರಿ ಮದುವೆ' ಮಾಸ್ಟರ್ ಪೀಸ್. 50ನೇ ಧಾರಾವಾಹಿಯನ್ನು ಕಾದು ಮಾಡುತ್ತಿದ್ದೇನೆ. 'ಬಿಗ್‌ಬಾಸ್'ನಿಂದ ಬಂದ ಮೇಲೆ ಒಂದು ವರ್ಷ ಮನೆಯಲ್ಲೇ ಇದ್ದೆ. ಇದರ ಬಗ್ಗೆ ತುಂಬ ನಿರೀಕ್ಷೆ ಇದೆ. ಧಾರಾವಾಹಿ ಎನ್ನುವುದು ಕೂಡ ವರ್ತಮಾನ ಪತ್ರಿಕೆಯಂತೆ, ಇಂದಿನದ್ದು ನಾಳೆ ಮರೆತೇ ಹೋಗುತ್ತದೆ ಎನ್ನುತ್ತಾರೆ. ಆದರೆ, ಪರಿಣಾಮಕಾರಿ ಕಥೆಗಳು ಜನರ ಮನಸ್ಸಿನಲ್ಲಿ ಉಳಿದುಕೊಳ್ಳುತ್ತವೆ. ಹಾಗೆ ಉಳಿಯಲು ಬಿಗಿಯಾದ ಕಥೆಗೆ ಒಳ್ಳೆಯ ನಿರ್ದೇಶಕ ಮತ್ತು ಕಲಾವಿದರು ಸಿಗಬೇಕು ಎಂದು ಅನಿಸುತ್ತದೆ. ಒಳ್ಳೆಯ ಕಂಟೆಂಟ್ ಮತ್ತು ಅದರ ನಿರೂಪಣೆ ಚೆನ್ನಾಗಿರಬೇಕು ಅಷ್ಟೆ.

■ **ರಾಘವೇಂದ್ರ ಕೆ.**